**QP – 001**

# ಪ್ರಥಮ ಸೆಮಿಸ್ಟರ್ ಬಿ.ಎ./ಬಿ.ಹೆಚ್.ಎಂ./ಬಿ.ಎಸ್.ಡಬ್ಲ್ಯೂ. ಪರೀಕ್ಷೆ, ಮಾರ್ಚ್/ಏಪ್ರಿಲ್ 2022

## [(CBCS) (2017-18 and Onwards)] (Repeaters)

## ಕನ್ನಡ ಭಾಷಾ ಪಠ್ಯ

## ಕನ್ನಡ ಭಾಷಾ ಪತ್ರಿಕೆ – 1

ಸಮಯ : 3 ಗಂಟೆಗಳು　　　　　　　　　　　　　　　　ಗರಿಷ್ಠ ಅಂಕಗಳು : 70

I. ಅ) ಈ ಪದ್ಯದ ಭಾವಾರ್ಥವನ್ನು ಬರೆಯಿರಿ. **(1×6=6)**

ಕಳೆದಿಡುವುದೇ ಕಷ್ಟಂ ಭೂ
ತಳ ರಾಜ್ಯ ವಿಮೋಹಮಚಿರ ರುಚಿ ಸಂಚಳಮಂ ।
ತಳವುಗಿಡಿಸಿದುದು ಮನುಕುಲ
ತಿಳಕನುಮಂ ಖಳಮಹೀಶರುಟಿದವರಳವೇ ॥

ಆ) ಎರಡನ್ನು ಕುರಿತು ಟಿಪ್ಪಣಿ ಬರೆಯಿರಿ. **(2×2=4)**

1) ಚಕ್ರರತ್ನ
2) ಅಮುಗೆ ರಾಯಮ್ಮ
3) ಭಾವಗೀತೆ
4) ಕವಿಪ್ರತಿಭೆ.

ಇ) **ಒಂದು** ಪ್ರಶ್ನೆಗೆ ವಿವರವಾದ ಉತ್ತರ ಬರೆಯಿರಿ. **(1×10=10)**

1) ವಚನಕಾರರ 'ಕಾಯಕ ಮಹತ್ವ' ಮತ್ತು 'ಅಪರಿಗ್ರಹ ತತ್ವ'ಗಳನ್ನು ಆಯ್ದಕ್ಕಿ ಮಾರಯ್ಯನ ವಚನಗಳ ಹಿನ್ನೆಲೆಯಲ್ಲಿ ವಿಶ್ಲೇಷಿಸಿ.
2) 'ದೇವರು ರುಜು ಮಾಡಿದನು' ಕವಿತೆಯಲ್ಲಿ ಪ್ರಕೃತಿ ಸೌಂದರ್ಯವನ್ನು ಕಂಡ ಕವಿ ರಸವಶನಾದ ಬಗೆಯನ್ನು ವಿವರಿಸಿ.

II. ಅ) **ಎರಡು** ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ. **(2×5=10)**

1) ಮತದಾನದ ವಿಡಂಬನೆ 'ತಿರುಕಣ್ಣನ ಮತದಾನ' ಕಥೆಯಲ್ಲಿ ಮೂಡಿಬಂದಿರುವ ಬಗೆ.
2) ರಾತ್ರಿಯಿಡೀ ಓದಲು ಸಹಪಾಠಿಗಳು ಮಾಡಿಕೊಂಡ ಸಿದ್ಧತೆ.
3) ಡಾಂಬರಿನ ಡ್ರಮ್ಮುಗಳು ಗುಂಡಿಗೆ ಬಿದ್ದ ಸನ್ನಿವೇಶ.
4) ಚುನಾವಣೆಯ ಕಾವು ಏರಿದ ಬಗೆ.

ಆ) **ಒಂದು** ಪ್ರಶ್ನೆಗೆ ವಿವರವಾಗಿ ಉತ್ತರಿಸಿ. **(1×10=10)**

1) ಪಂಜ್ರೊಳ್ಳಿ ಪಿಶಾಚಿ ಕಂಡುದರ ಕುರಿತು ನಿರೂಪಕರ ವಿಶ್ಲೇಷಣೆ ಏನು ? ವಿವರಿಸಿ.
2) ಹಳ್ಳಿಯಲ್ಲಿ ಪತ್ರಿಕೆ ಉಂಟು ಮಾಡಿದ ಕ್ರಾಂತಿ ಮತ್ತು ಅದರ ಪರಿಣಾಮಗಳನ್ನು ಚರ್ಚಿಸಿ.

P.T.O.

III. ಅ) ಒಂದು ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿ. (1×5=5)

1) ಜನಪದ ಕಥೆಗಳ ಸ್ವಾರಸ್ಯ.

2) ಹಾಲಕ್ಕಿ ಗೌಡರ ಜನಪದ ಕಲೆ.

ಆ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿ. (1×10=10)

1) ಮಾಂತ್ರಿಕನ ಕೊಲೆ ಮತ್ತು ರಾಜಕುಮಾರನ ಅಂತ್ಯದ ಸನ್ನಿವೇಶಗಳನ್ನು ಚಿತ್ರಿಸಿ.

2) ಬೆಂಗಳೂರಿನ ಬೆಳವಣಿಗೆಯಲ್ಲಿ ಕೆಂಪೇಗೌಡರ ಕೊಡುಗೆಯನ್ನು ವಿವರಿಸಿ.

IV. ಅ) ಒಂದು ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿ. (1×5=5)

1) ಸೃಜನಶೀಲತೆ ಎದುರಿಸುತ್ತಿರುವ ಬಿಕ್ಕಟ್ಟುಗಳು.

2) ಡಾ. ರಾಜಕುಮಾರ್‌ರವರ ವ್ಯಕ್ತಿತ್ವದ ಸಾಮಾಜಿಕ ಆಯಾಮಗಳು.

ಆ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿ. (1×10=10)

1) ಕನ್ನಡ ಭಾಷೆಯ ಸಮಕಾಲೀನ ಸವಾಲುಗಳು ಮತ್ತು ಅವುಗಳ ಪರಿಹಾರಕ್ಕಾಗಿ ಲಿಗಾಡೆಯವರು ಸೂಚಿಸಿರುವ ಮಾರ್ಗಗಳನ್ನು ವಿಶ್ಲೇಷಿಸಿ.

2) ಸಾಹಿತ್ಯ ಚಳುವಳಿಗಳ ಪ್ರಸ್ತುತತೆಯನ್ನು ಕುರಿತು ಜಿ.ಎಸ್. ಶಿವರುದ್ರಪ್ಪರವರ ವಿಚಾರಗಳನ್ನು ಚರ್ಚಿಸಿ.

---